ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಂದ ಕ್ರಿ.ಶ. 1425ರಲ್ಲಿ ಇದ್ದ ಕವಿ ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ ಗ್ರಂಥವು ಪ್ರಕಟವಾಗುವುದರ ಮೊದಲೇ 1940ರ ಸುಮಾರಿನಲ್ಲಿ ಮಂಜೇಶ್ವರ ಗೋವಿಂದ ಪೈ ಅವರು ಕವಿಯ ಕಾಲ ಕುರಿತಾಗಿ ಲೇಖನ ಬರೆಯಲು ಪರಿಶೀಲಿಸಿದ ಕಾವ್ಯ ಪಠ್ಯಗಳ ಪಟ್ಟಿ ಹೀಗಿದೆ. 1887ರಲ್ಲಿ ವೆಲನಾಡು ಸುಬ್ಬಯ್ಯ, ಬೆಂಗಳೂರು ಇವರು ಸಿದ್ಧಪಡಿಸಿದ ಆದಿಪಂಚಕ ಮತ್ತು ಯುದ್ಧಪಂಚಕ ಗ್ರಂಥ. 1928ರಲ್ಲಿ ಟಿ.ಎನ್. ಶ್ರೀನಿವಾಸ ಶೆಟ್ಟರು, ಬೆಂಗಳೂರು ಇವರು ಪ್ರಕಟಿಸಿದ ಶ್ರೀಮನ್ಮಹಾಭಾರತ ದಶಪರ್ವ. ಇದರೊಂದಿಗೆ ಮೈಸೂರು ಸರ್ಕಾರದ ಓರಿಯೆಂಟಲ್ ಲೈಬ್ರರಿಯವರು ಪ್ರಕಟಿಸಿದ ಕರ್ಣಾಟ ಮಹಾಭಾರತದೊಂದಿಗೆ, ಹರ್ಮನ್ ಮೊಗ್ಲಿಂಗ್ ಎಲ್ಲರಿಗಿಂತ ಮೊದಲು 1851ರಲ್ಲಿ ಸಂಪಾದಿಸಿದ ಆದಿಪಂಚಕದ ನಾಲ್ಕು ಪರ್ವಗಳ ಕೃತಿಯನ್ನೂ ಗಮನಿಸಿದ್ದಾರೆ.

1850ರ ಸುಮಾರಿನಿಂದ 1990ರವರೆಗೆ ಕುಮಾರವ್ಯಾಸನ ಕಾವ್ಯದ ಭಾಗ ಭಾಗಗಳು ದೇಶಿ, ವಿದೇಶಿ ವಿದ್ವಾಂಸರಿಂದ ಇಡಿಯಾಗಿಯೂ, ಬಿಡಿಬಿಡಿಯಾಗಿಯೂ ಐವತ್ತಕ್ಕೂ ಮಿಕ್ಕ ಆವೃತ್ತಿಗಳು ಪ್ರಕಟವಾಗಿರುತ್ತವೆ. ಈ ಆವೃತ್ತಿಗಳ ನಡುವೆ ಕುವೆಂಪು, ಮಾಸ್ತಿಯವರು ಸಂಪಾದಿಸಿದ ಭಾರತ ಕಥಾಮಂಜರಿ ಪಠ್ಯ ಪ್ರಕಟವಾದ ನಂತರ ಅದೊಂದು ಜನಪ್ರಿಯ ಆವೃತ್ತಿಯಾಗಿ, 40 ಸಾವಿರ ಪ್ರತಿಗಳು ಪ್ರಕಟವಾಗಿ, 2 ರೂ. ಬೆಲೆಯ ಮೇಲೆ ಕರ್ಣಾಟಕದ ಎಲ್ಲ ಗ್ರಾಮಗಳಲ್ಲಿ ಅಕ್ಷರ ಬರುವ ಮತ್ತು ಬಾರದವರೆಲ್ಲರನ್ನೂ ತಲುಪುವಂತಾಯಿತು. ಕುವೆಂಪು ಅವರು ತಾವು ಸಂಪಾದಿಸಿದ ಆವೃತ್ತಿಯ ಪ್ರಸ್ತಾವನೆಯಲ್ಲಿ 'ನಾವು ಸಿದ್ಧಗೊಳಿಸಿರುವುದು ಜನಪ್ರಿಯ ಪ್ರತಿ ಮಾತ್ರ. ಸಂಶೋಧಿತ ವಿಶುದ್ಧ ಪ್ರತಿ ಬರದ ತನಕ ಕುಮಾರವ್ಯಾಸನ ಪ್ರತಿಭೆಯ ನಿಜಸ್ವರೂಪದ ಸಂಪೂರ್ಣ ದರ್ಶನವಾಗುವುದಿಲ್ಲ' ಎಂದಿದ್ದಾರೆ. ಈ ಮಾತು ನಿಜ. ಪಂಪನ ವಿಕ್ರಮಾರ್ಜುನ ವಿಜಯದ ಪ್ರತಿಗಳು ದೊರಕಿರುವುದು ಮೂರು ಮಾತ್ರವಾದರೆ, ಸಂಗ್ರಹವಾಗಿರುವ ಕುಮಾರವ್ಯಾಸನ ತಾಳೆಯೋಲೆಯ ಪ್ರತಿಗಳು ಸರಿ ಸುಮಾರು ನೂರ ಇಪ್ಪತ್ತಕ್ಕೂ ಹೆಚ್ಚು ಸಿಕ್ಕಿವೆ. ಇವುಗಳಲ್ಲಿ ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿರುವ ತಾಳೆಗರಿಯ ಪ್ರತಿಗಳು 1530ರ ಸುಮಾರಿನಲ್ಲಿ ಪ್ರತಿಯಾದದ್ದು. ಇವುಗಳ ಮೂಲಕ ಮತ್ತಿತರ ಪ್ರತಿಗಳ ಸಹಾಯದಿಂದ ಶುದ್ಧ ಪ್ರತಿ ಪ್ರಕಟವಾಗುವುದರ ಮೊದಲೇ ತಾಳೆಗರಿ ಪ್ರತಿ ಮೂಲಕವೋ, ಕಲ್ಲಚ್ಚಿನ ಪ್ರತಿಯಿಂದಲೋ, ತದನಂತರ ಪ್ರಕಟವಾದ ಪುಸ್ತಕ ಪ್ರತಿಗಳಿಂದಲೋ ಕುಮಾರವ್ಯಾಸನು ಕರ್ಣಾಟಕದಾದ್ಯಂತ ಓದಲ್ಪಟ್ಟದ್ದು ಮಾತ್ರ ಆಶ್ಚರ್ಯ ಹುಟ್ಟಿಸುತ್ತದೆ. ಬಹುಶಃ ಕನ್ನಡದ ಮತ್ಯಾವ ಕವಿಗೂ ಈ ಬಗೆಯ ಓದು–ವ್ಯಾಖ್ಯಾನ ಅವಕಾಶ ಲಭಿಸಿರುವುದಿಲ್ಲವೆಂದೇ ಹೇಳಬೇಕು.

★★★

ಬೆಂಗಳೂರಿನಲ್ಲಿ 1959ರ ವೇಳೆಗೆ ಅ.ನ.ಕೃ. ಅವರಿಂದ ಉದ್ಘಾಟನೆಗೊಂಡ ಕರ್ಣಾಟಕ ಸಂಘದಲ್ಲಿ ಡಾ. ಬಿ. ಶಿವಮೂರ್ತಿ ಶಾಸ್ತ್ರೀ ಅವರ ಸಮ್ಮುಖದಲ್ಲಿ ಗಮಕ ತರಗತಿಗಳು ಆರಂಭಗೊಂಡವು. 1964ರಲ್ಲಿ ಅದೇ ಬೆಂಗಳೂರಿನಲ್ಲಿ ಡಿ.ವಿ.ಜಿ.ಯವರಿಂದ ಉದ್ಘಾಟನೆಗೊಂಡ ಕಾವ್ಯ ಪ್ರಚಾರ ಮಂಡಳಿಯಲ್ಲಿ ಭಾಗವಹಿಸಿ ಭಾರತ ಬಿಂದೂರಾಯರಿಂದ ಕುಮಾರವ್ಯಾಸನ ಕಾವ್ಯವಾಚನ ಕೇಳಿದವರು ಕೆಂಗಲ್ ಹನುಮಂತಯ್ಯನವರು, ಮಾಸ್ತಿಯವರು, ಎಂ.ಆರ್. ಬದರಿನಾರಾಯಣ, ಬಿ.ಡಿ. ಜತ್ತಿ, ಎನ್.ಎಂ.ಕೆ. ಸೋಗಿ, ಭೂಪಾಳಂ ಚಂದ್ರಶೇಖರಯ್ಯ, ಕೋ. ಚನ್ನಬಸಪ್ಪ, ಜಿ. ನಾರಾಯಣ ಮುಂತಾದವರು. ಇಲ್ಲಿ ಗಮಕವಾಚನ ಮಾಡಿದ ಭಾರತ ಬಿಂದೂರಾಯರು ಕುಮಾರವ್ಯಾಸನ ಕಾವ್ಯವನ್ನು ಬಿಟ್ಟು ಬೇರೊಂದು ಕೃತಿಯನ್ನು ವಾಚನ ಮಾಡಿದವರಲ್ಲ. ಇವರನ್ನು ಭಾರತದ ಬಿಂದೂರಾಯರು ಎಂತಲೇ ಕರೆಯಲಾಗಿತ್ತು. ಇಲ್ಲಿಯೇ ಮತ್ತೊಂದು ಸಂಗತಿಯನ್ನು ಪ್ರಸ್ತಾಪಿಸಬೇಕು.